ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 3/2021 ಸಿಡಬ್ಲೂಃ 3 ಪಿ ಡಬ್ಲೂಃ 1**

| | |
|---|---|
| ಹೆಸರು | ಜಯಕುಮಾರ್ ಕೆ. |
| ತಂದೆಯ ಹೆಸರು | ಎಂ. ಕರಿಯಪ್ಪ |
| ವಯಸ್ಸು | 47 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಕೆ ಶೆಟ್ಟಹಳ್ಳಿ ಗ್ರಾಮ |

ದಿನಾಂಕಃ 21.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 2 ರಿಂದ 11 ರವರ ಪರಿಯಚವಿದೆ.
2. ನಮ್ಮ ಊರಿನ ಟಿ. ಬೆಟ್ಟಯ್ಯ ಅವರು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ದಿಃ 13.07.2020ರಂದು ಸುಮಾರು 3.15 ರಿಂದ 3.20 ಗಂಟೆಗೆ ಗೌರಪುರದ ಹತ್ತಿರ ಇರುವ ಸಿ ಡಿ ಎಸ್ ಚಾನಲ್ ಹತ್ತಿರ ನಾನು, ಚಾಸಾ 2 ಮತ್ತು 3 ಕುಳಿತುಕೊಂಡಿದ್ದೆವು. ಆಗ ಟಿ. ಬೆಟ್ಟಯ್ಯ, ಫುಟ್ ಪಾತ್ ನಲ್ಲಿ ನಿಂತಿದ್ದರು. ಬೆಂಗಳೂರು ಕಡೆಯಿಂದ ಆಗ ಅತಿವೇಗವಾಗಿ ಒಂದು ಟಿ ಟಿ ಗಾಡಿ ಅನ್ನು ಅದರ ಚಾಲಕ ಅತಿವೇಗವಾಗಿ ಚಲಾಯಿಸಿಕೊಂಡು ಬಂದು ಡಿಕ್ಕಿ ಪಡಿಸಿರುವುದಾಗಿ ಚಾಸಾ 2 ರವರು ನನಗೆ ತಿಳಿಸಿದ್ದು, ನಾನು ಮತ್ತು ಚಾಸಾ 2 ಹಾಗೂ 3 ರವರು ಹೋಗಿ ನೋಡಲಾಗಿ ಟಿ. ಬೆಟ್ಟಯ್ಯ ಅವರ ತಲೆ ಮತ್ತು ಕಾಲಿಗೆ ರಕ್ತ ಗಾಯವಾಗಿತ್ತು. ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಸದರಿ ಬೆಟ್ಟಯ್ಯ ಅವರನ್ನು ಒಂದು ಖಾಸಗಿ ವಾಹನದಲ್ಲಿ ನಾನು, ಚಾಸಾ 2 ಮತ್ತು 3 ಕರೆದುಕೊಂಡು ಹೋಗಿ ಸೇರಿಸಿರುತ್ತೇವೆ. ಹೆಚ್ಚಿನ ಚಿಕಿತ್ಸೆಗೆ

ಮೈಸೂರಿಗೆ ಕರೆದುಕೊಂಡು ಹೋಗಲು ತಿಳಿಸಿದ್ದು, ನಾನು ಬೆಟ್ಟಯ್ಯ ಅವರನ್ನು ಮೈಸೂರಿನ ನಾರಾಯಣ ಹೃದಯಾಲಯಕ್ಕೆ ರಕೆದುಕೊಂಡು ಹೋಗಿರುತ್ತೇನೆ. ಅಪಘಾತದ ವಿಷಯವನ್ನು ಅವರ ಕುಟುಂಬದವರಿಗೆ ತಿಳಿಸಿದ್ದು, ನಾನು ಅಲ್ಲಿಂದ ತಿಳಿಸಿರುತ್ತೇನೆ. ಬೆಟ್ಟಯ್ಯ ಅದೇ ದಿನ ಮರಣ ಹೊಂದಿರುವುದಾಗಿ ನನಗೆ ತಿಳಿಸಿರುತ್ತಾರೆ. ಅಪಘಾತಪಡಿಸಿದ ಚಾಲಕ ಸ್ಥಳದಿಂದ ಓಡಿ ಹೋಗಿದ್ದು, ತನ್ನ ವಾಹನವನ್ನು ಅಲ್ಲೇ ಬಿಟ್ಟು ಹೋಗಿರುತ್ತಾನೆ. ಅಪಘಾತ ಪಡಿಸಿದ ಟಿ ಟಿ ವಾಹನದ ಸಂಖ್ಯೆ ಕೆಎಲ್-58-ಇ-1797 ಆಗಿರುತ್ತದೆ. (ಸಾಕ್ಷಿ ತಮ್ಮ ಕೈಯಲ್ಲಿ ವಾಹನ ನೋಂದಣಿ ಸಂಖ್ಯೆಯನ್ನು ಬರೆದುಕೊಂಡಿದ್ದು, ಅದನ್ನು ನೋಡಿ ವಾಹನ ಸಂಖ್ಯೆಯನ್ನು ತಿಳಿಸಿರುತ್ತಾರೆ. ದೂರನ್ನು ನಾನೇ ನೀಡಿರುತ್ತೇನೆ. ಮರುದಿನ ಪೊಲೀಸರು ಅಪಘಾತ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ಅಪಘಾತ ಸ್ಥಳವನ್ನು ನಾನು, ಚಾಸಾ 2 ಮತ್ತು 3 ತೋರಿಸಿರುತ್ತೇವೆ. ಪಂಚನಾಮೆಯಲ್ಲಿ ನಾನು, ಚಾಸಾ 2 ಮತ್ತು 3 ಸಹಿ ಮಾಡಿರುತ್ತೇವೆ. ನನಗೆ ಪಂಚನಾಮೆ ಮಾಡಿರುವ ಸಮಯ ತಿಳಿದಿಲ್ಲ. ತದನಂತರ ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ.

3. ಸಾಕ್ಷಿ ದೂರನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ದೂರನ್ನು ನಿಪಿ 1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಪಂಚನಾಮೆಯನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅನ್ನು ನಿಪಿ 2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ 2 ಪೊಟೋಗಳನ್ನು ನೋಡಿ ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿದ್ದು, ಅವುಗಳನ್ನು ನಿಪಿ3 ಮತ್ತು 4 ಎಂದು ಗುರುತಿಸಲಾಗಿದೆ. 5 ಫೋಟೋಗಳನ್ನು ನೋಡಿ ಅದು ಮೃತ ಟಿ. ಬೆಟ್ಟಯ್ಯ ಎಂದು ಗುರುತಿಸಿದ್ದು, ಅವುಗಳನ್ನು ನಿಪಿ

6 ರಿಂದ 10 ಎಂದು ಗುರುತಿಸಲಾಗಿದೆ. ಸಾಕ್ಷಿ 3 ಫೋಟೋಗಳನ್ನು ನೋಡಿ ಟಿ ಟಿ ವಾಹನವನ್ನು ಗುರುತಿಸಿದ್ದು, ಅವುಗಳನ್ನು 11 ರಿಂದ 13 ಎಂದು ಗುರುತಿಸಲಾಗಿದೆ. (ಕಲಂ 65ಬಿ ಪ್ರಮಾಣ ಪತ್ರದ ಇಲ್ಲದ ಕಾರಣ, ಸದರಿ ಫೋಟೋಗಳನ್ನು ಆರೋಪಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ಗುರುತಿಸಲಾಗಿದೆ.)

4. ಸಾಕ್ಷಿ ಮರುದೂರನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಮರುದೂರನ್ನು ನಿಪಿ 14 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನಾನು ಮರುದೂರನ್ನು ನೀಡಿಲ್ಲ, ಪೊಲೀಸರು ಸಹಿ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ನಾನು ಆರೋಪಿಯನ್ನು ನೋಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ. ಅಪಘಾತಕ್ಕೆ ಚಾಲಕನ ಅತಿವೇಗ ಕಾರಣ.

<u>ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>

<u>ಪಾಟೀ ಸವಾಲುಃ ಎ ಪಿ ಪಿ ರವರಿಂದಃ</u>

5. ಅಪಘಾತವಾದ ನಂತರ ನಾವು ಮೃತರನ್ನು ಶ್ರೀರಂಗಪಟ್ಟಣ ಆಸ್ಪತ್ರೆಗೆ ಕರೆದುಜೊಂಡು ಹೋಗಿದ್ದು, ನಾನು ಅವರ ಮನೆಯವರಿಗೆ ವಿಷಯ ತಿಳಿಸಿರುತ್ತೇನೆ ಎಂದರೆ ಸರಿ. ಆಗ ಚಾಸಾ 9 ಬೆಟ್ಟಯ್ಯ ಅವರ ಮಗ ಬಂದು ಮೃತರನ್ನು ನಾರಾಯಣ ಹೃದಯಾಲಯಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ದಿಃ 14.07.2020 ರಂದು ಪೊಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12 ರಿಂದ 12.30 ವರೆಗೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಸಮಯ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ2

ಪಂಚನಾಮೆಗೆ ನನ್ನೊಂದಿಗೆ ಚಾಸಾ 10 ಮತುತ 11 ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 3 ಮತ್ತು 4 ರಲ್ಲಿ ನಾನು, ಚಾಸಾ 2 ಮತ್ತು 3 ಇರುತ್ತೇವೆ ಎಂದರೆ ಸರಿ. ದಿಃ 14.07.2020 ರಂದು ನಾನು ಮರುದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಸಹಿ ನನ್ನದು, ಅದನ್ನು ನಾನು ಬರೆದಿಲ್ಲ ಹಾಗೂ ಅದರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಮಾಡಿದಾಗ ಚಾಸಾ 10 ಮತ್ತು 11 ಹಾಜರಿದ್ದರು ಎಂದರೆ ಸರಿಯಲ್ಲ. ನಾನು ಮರುದೂರನ್ನು ದಿಃ 15.07.2020 ರಂದು ನೀಡಿದ್ದರೂ ಸಹ ನೀಡಿಲ್ಲ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಟಿ ಟಿ ವಾಹನವನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಡಿಕ್ಕಿ ಪಡಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಆತ ಓವರ್ ಟೇಕ್ ಮಾಡಿ ಅತಿವೇಗವಾಗಿ ಬಂದು ಅಪಘಾತಪಡಿಸಿರುತ್ತಾನೆ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ನಾನು ಆತನನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ನಾನು ಆ ದಿನ ಆರೋಪಿಯನ್ನು ನೋಡಿದ್ದು, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್ ಪಿ ವಕೀಲರಿಂದಃ</u>

ನಾನು 10ನೇ ತರಗತಿಯವರೆಗೂ ಓದಿರುತ್ತೇನೆ. ನನಗೆ ಕೈ ಬರವಣಿಗೆಯಲ್ಲಿ ದೂರು ನೀಡಲು ತೊಂದರೆ ಇರಲಿಲ್ಲ. ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ

ಸಹಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದೂರಿನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಓದಿ ತಿಳಿಸಿ ಸಹಿ ಪಡೆದಿರುವುದಿಲ್ಲ ಎಂದರೆ ಸರಿ. ನಾನು ಅಪಘಾತವಾದ ನಂತರ ಘಟನಾ ಸ್ಥಳಕ್ಕೆ ಹೋಗಿರುವ ಕಾರಣ ಅಪಘಾತಪಡಿಸಲಾಗಿದೆ ಎಂಬ ವಾಹನವು ಎಷ್ಟು ವೇಗದಲ್ಲಿ ಬರುತ್ತಿತ್ತು ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ಸಾಕ್ಷಿ ಅಲ್ಲಿ ಬರುವ ಎಲ್ಲಾ ವಾಹನಗಳು down ಇರುವ ಕಾರಣ ವೇಗವಾಗಿ ಬರುತ್ತವೆ ಎಂದು ನುಡಿಯುತ್ತಾರೆ. ಅಪಘಾತವಾಗಿರುವ ಸ್ಥಳದಲ್ಲಿ ಹೆಚ್ಚು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಮೃತ ಬೆಟ್ಟಯ್ಯನವರಿಗೆ 85 ವರ್ಷವಾಗಿತ್ತು ಎಂದರೆ ಸರಿ. ಹೆಚ್ಚು ವಾಹನಗಳು ಓಡಾಡುತ್ತಿರುವ ಕಾರಣ ನಾನು ನಿಖರವಾಗಿ ಯಾವ ವಾಹನದಿಂದ ಅಪಘಾತವಾಗಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಘಟನಾ ಸ್ಥಳದಲ್ಲಿ ಇಲ್ಲದ ಕಾರಣ ನನಗೆ ಅಪಘಾತಪಡಿಸಿದ ವಾಹನ ಯಾವುದು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಬೇರೇಯವರು ವಾಹನವನ್ನು ತೋರಿಸಿದ್ದು, ನಾನು ಅದನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸ್ಥಳ ಮಹಜರ್ ಗೆ ಬರುವಂತೆ ಪೊಲೀಸರು ಯಾವುದೇ ನೋಟೀಸ್ ನೀಡಿಲ್ಲ. ನಿಪಿ2ರಲ್ಲಿರುವ ಸಹಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ3 ಮತ್ತು 4 ಪೊಟೋಗಳನ್ನು ಯಾವಾಗ ಮತ್ತು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮಹಜರ್ ಸಮಯದಲ್ಲಿ ಪೋಟೋ ತೆಗೆದಿದ್ದಾರೆ ಎಂದು ನುಡಿಯುತ್ತಾರೆ. ನಿಪಿ 2 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ 11 ರಿಂದ 13ರ ಪೋಟೋಗಳಲ್ಲಿ ನಾನು ಇಲ್ಲ ಎಂದರೆ ಸರಿ. ನಾನು ಘಟನಾ ಸ್ಥಳದಲ್ಲಿ ಪೊಲೀಸರಿಗೆ ವಾಹನ ತೋರಿಸಿದ್ದು, ಅಮಾನತ್ತು ಸಮಯದಲ್ಲಿ ಅದನ್ನು ಗುರುತಿಸಿರುವುದಿಲ್ಲ. ನಾನು ಘಟನೆಯ ಪ್ರತ್ಯಕ್ಷ ಸಾಕ್ಷಿ ಅಲ್ಲದಿದ್ದರೂ,

ಮೃತರ ಕುಟುಂಬಕ್ಕೆ ಪರಿಹಾರ ಸಿಗಲಿ ಎಂಬ ಕಾರಣಕ್ಕೆ ಟಿ ಟಿ ವಾಹನ ಕೆಎಲ್-58-ಇ-1797 ದಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಘಟನಾ ಸ್ಥಳದಲ್ಲೇ ಅಪಘಾತಪಡಿಸದೇ ಇರುವ ಕಾರಣ ಇದ್ದು, ಆತ ಎಲ್ಲಿಯೂ ಓಡಿಹೋಗಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ವಿಚಾರಣೆ ಮಾಡಬೇಕೆಂದು ಹೇಳಿ ಆರೋಪಿಯನ್ನು ಠಾಣೆಗೆ ಕರೆಸಿ ಸುಳ್ಳು ಕೇಸ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದೂರಿನಲ್ಲಿ ಆರೋಪಿ ಘಟನಾ ಸ್ಥಳದಿಂದ ಓಡಿ ಹೋಗಿದ್ದಾನೆ ಎಂದು ತಿಳಿಸಿರುತೇನೆ. ಮೃತನು ನಮ್ಮ ಊರಿನವನೇ ಆಗಿದ್ದು, ಆತನಿಗೆ ಪರಿಹಾರ ಸಿಗಲಿ ಎಂಬ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*